**ಸಾಕ್ಷಿಯನ್ನು ದಿನಾಂಕ 23.8 .2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಎಂ.ಎಸ್.ಆರ್ ವಕೀಲರಿಂದಃ**

ನಾನು 9 ನೇ ತರಗತಿವರೆಗೆ ಓದಿರುತ್ತೇನೆ. ವಾದಿಯರು ಜಮೀನಿನ ವಿಚಾರವಾಗಿ ನಮ್ಮ ವಿರುದ್ದ ದಾವೆ ಹಾಕಿರುತ್ತಾರೆ. ನನ್ನ ತಂದೆಯ ಹೆಸರು ರಾಮಕೃಷ್ಣಯ್ಯ ಆಗಿರುತ್ತದೆ. ನನ್ನ ಗಂಡ ಅಚ್ಯುತನ್ ರವರ ತಂದೆಯ ಹೆಸರು ವೆಂಕಟಯ್ಯ ಆಗಿರುತ್ತದೆ. ಸದರಿ ವೆಂಕಟಯ್ಯ ರವರಿಗೆ 4 ಜನ ಮಕ್ಕಳಿದ್ದು ಅವರ ಹೆಸರು ದಾಸಯ್ಯ, ತಿಮ್ಮಯ್ಯ, ಅಚ್ಯುತನ್ ಮತ್ತು ಕೃಷ್ಣನ್ ಆಗಿರುತ್ತದೆ. ಸದರಿ ದಾಸಯ್ಯ ರವರಿಗೆ ಮೂರು ಜನ ಮಕ್ಕಳಿದ್ದು ರಾಜ, ಲೋಕೇಶ ಹಾಗೂ ದೊರೆರಾಜು ಆಗಿರುತ್ತದೆ. ತಿಮ್ಮಯ್ಯ ರವರಿಗೆ ದಾಸಯ್ಯ ಎಂಬ ಮಗನಿರುವುದಿಲ್ಲ. ನಿಡಿ22 ರಲ್ಲಿ ತಿಮ್ಮಯ್ಯನ ಮಗ ದಾಸಯ್ಯ ಎಂದು ನಮೂದಾಗಿದ್ದು ಸದರಿ ತಿಮ್ಮಯ್ಯ ನವರಿಗೆ ದಾಸಯ್ಯ ಎಂಬ ಮಗನಿರುವುದಿಲ್ಲ ಎಂದರೆ ಸಾಕ್ಷಿದಾರರು ದಾಖಲೆಯನ್ನು ಹಾಜರುಪಡಿಸುತ್ತೇನೆ ಎನ್ನುವರು. ವೆಂಕಟಯ್ಯ ನವರ ಮಕ್ಕಳು ದಾಸಯ್ಯ ಮತ್ತು ತಿಮ್ಮಯ್ಯ ಹೊರತುಪಡಿಸಿ ಅವರ ಕುಟುಂಬದಲ್ಲಿ ಬೇರೆ ಯಾರು ತಿಮ್ಮಯ್ಯನ ಮಗ ದಾಸಯ್ಯ ಇರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ದಾಸಯ್ಯನ ಹೆಂಡತಿ 1 ನೇ ಪ್ರತಿವಾದಿಯಾಗಿರುತ್ತಾರೆ. ದಾಸಯ್ಯ ನವರಿಗೆ ದೊರೆರಾಜು, ಲೋಕೇಶ, ಕೆಂಪರಾಜು ಮತ್ತು ಚಿನ್ನಮ್ಮ ಎಂಬ ಮಕ್ಕಳಿದ್ದು ಅವರನ್ನು ಹೊರತುಪಡಿಸಿ ಬೇರೆ ಯಾರು ಇರುವುದಿಲ್ಲ. ಸದರಿ ದಾಸಯ್ಯ ನವರ ಮಕ್ಕಳು ಸೇರಿ ನನಗೆ ಕ್ರಯಪತ್ರವನ್ನು ಮಾಡಿಕೊಟ್ಟಿರುವುದಿಲ್ಲ. ನಿಡಿ22 ರಲ್ಲಿ ಪಿತ್ರಾರ್ಜಿತ ಆಸ್ತಿ ಎಂದು ನಮೂದಿಸಿದ್ದು ಅವರ ಕುಟುಂಬದ ಎಲ್ಲರೂ ಸೇರಿ ಕ್ರಯಪತ್ರವನ್ನು ಮಾಡಿಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿದಾರರು ಕಮಲಮ್ಮ ಮತ್ತು ದಾಸಯ್ಯ ನವರು ಬದುಕಿದ್ದರಿಂದ ಅವರು ಬಂದು ಸಹಿ ಮಾಡಿ ಕ್ರಯಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎನ್ನುವರು. 1 ನೇ ಪ್ರತಿವಾದಿಯು ನಿಡಿ22 ದಾಖಲೆಗೆ ಸಹಿ ಮಾಡಿರುತ್ತಾರೆ. ವೆಂಕಟಯ್ಯ ರವರಿಗೆ ಚಿಕ್ಕತಾಯಮ್ಮ ಎಂಬ ಮಗಳಿರುತ್ತಾರೆ ಎಂದರೆ ಸರಿ. ಸದರಿ ಚಿಕ್ಕತಾಯಮ್ಮ ನವರ ಮಗನ ಹೆಸರು ಬಸವರಾಜು ಆಗಿರುತ್ತದೆ. ಅವರು ಹೆಚ್.ಡಿ.ಕೋಟೆ ತಾಲ್ಲೂಕು ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಅವರು ತಾಲ್ಲೂಕು ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದಾಗ ನಾನು ಅವರ ಜೊತೆ ಸೇರಿ ನಿಡಿ22 ನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ22 ನ್ನು ನಾನು ಸೃಷ್ಟಿ ಮಾಡಿಕೊಂಡಿರುವುದರಿಂದ ನನಗಾಗಲೀ ಅಥವಾ ನನಗೆ ಮಾರಾಟ ಮಾಡಿದವರಿಗಾಗಲೀ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಿಡಿ22 ಕ್ರಯಪತ್ರವನ್ನು ಮಾಡಿಸಿಕೊಂಡಾಗ ಯಾವ ದಾಖಲಾತಿಯನ್ನು ಪಡೆದುಕೊಂಡಿರುತ್ತೀರಿ ಎಂದರೆ ಸಾಕ್ಷಿದಾರರು ಪಹಣಿ ಮತ್ತು ಎಂ.ಆರ್ ನ್ನು ಪಡೆದುಕೊಂಡಿರುತ್ತೇನೆ ಎನ್ನುವರು. ಸದರಿ ಪಹಣಿ ಮತ್ತು ಎಂ.ಆರ್ ನಲ್ಲಿ ತಿಮ್ಮಯ್ಯ ಮತ್ತು ದಾಸಯ್ಯ ನವರ ಹೆಸರಿತ್ತು. ಸದರಿ ಪಹಣಿ ಮತ್ತು ಎಂ.ಆರ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ನಿಡಿ22 ರಲ್ಲಿ ಸದರಿ ದಾಖಲೆಗಳನ್ನು ಪಡೆದುಕೊಂಡಿರುವ ಬಗ್ಗೆ ಬರೆಸಿರುತ್ತೇನೆ. ನಿಡಿ22 ರಲ್ಲಿ ನಮೂದಿಸಿರುವ ಆಸ್ತಿಯು ಮೂಲತಃ ನನ್ನ ಭಾವ ಮತ್ತು ಮೈದುನನಾದ ತಿಮ್ಮಯ್ಯ ಮತ್ತು ದಾಸಯ್ಯ ನವರಿಗೆ ಸೇರಿತ್ತು. ನಾನು ಕ್ರಯಪತ್ರ ಮಾಡಿಸಿಕೊಳ್ಳುವ ಸಮಯದಲ್ಲಿ ಪಡೆದುಕೊಂಡಿದ್ದೇನೆ ಎಂದು ಹೇಳುವ ಮೂಲ ದಾಖಲೆಗಳ ಬಗ್ಗೆ ನನ್ನ ಲಿಖಿತ ಹೇಳಿಕೆ ಮತ್ತು ಪ್ರಮಾಣಪತ್ರದಲ್ಲಿ ಹೇಳಿರುತ್ತೇನೆ.

ನಿಡಿ23 ರಲ್ಲಿ ಕುಳ್ಳದಾಸಯ್ಯ ಬಿನ್ ದಾಸಯ್ಯ, ದರಕಾಸ್ತು ಮೂಲಕ ಎಂದು ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ನಿಡಿ23 ರಲ್ಲಿ 4 ಎಕರೆ ಪೈಕಿ 5 ಗುಂಟೆ ಖರಾಬು, ವಿಸ್ತೀರ್ಣ 3-35 ಎಕರೆ ಎಂದು ನಮೂದಾಗಿರುತ್ತದೆ ಎಂದರೆ ಸರಿ. ಸದರಿ ಕುಳ್ಳದಾಸಯ್ಯ ಬಿನ್ ದಾಸಯ್ಯ ನವರು ತಿಮ್ಮಯ್ಯ ಮತ್ತು ದಾಸಯ್ಯ ನವರಿಗೆ ಕ್ರಯ ಮಾಡಿರುವ ಬಗ್ಗೆ ದಾಖಲಾತಿಯನ್ನು ಪಡೆದುಕೊಂಡು ನಾನು ನಿಡಿ22 ರಂತೆ ಕ್ರಯಪತ್ರವನ್ನು ಮಾಡಿಕೊಂಡಿರುವುದಿಲ್ಲ. ನಿಡಿ23 ದಾಖಲೆಯನ್ನು ನನ್ನ ಭಾವನಾದ ದಾಸಯ್ಯ ನವರು ಪಡೆದುಕೊಂಡಿದ್ದು, ಕ್ರಯಪತ್ರವಾಗುವ ಸಮಯದಲ್ಲಿ ನನಗೆ ನೀಡಿರುತ್ತಾರೆ. ನಿಡಿ23 ರಲ್ಲಿ ಅದನ್ನು ಪಡೆದುಕೊಂಡ ದಿನಾಂಕ 18.2.2014 ಎಂದು ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಕೈಬರಹ ಪಹಣಿಗಳಲ್ಲಿ ಸದರಿ ಆಸ್ತಿಯು ಕುಳ್ಳದಾಸಯ್ಯ ಬಿನ್ ದಾಸಯ್ಯ ನವರಿಗೆ ದರಕಾಸ್ತು ಮೂಲಕ ಬಂದಿರುತ್ತದೆ ಎಂದು ನಮೂದಾಗಿದ್ದು, ನಾನು ಕ್ರಯಪತ್ರ ಮಾಡಿಕೊಟ್ಟವರ ಜೊತೆ ಶಾಮೀಲಾಗಿ ಸುಳ್ಳು ಕ್ರಯಪತ್ರವನ್ನು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ24 ರ ವ್ಯವಸಾಯಗಾರರ ಕಲಂ ನಲ್ಲಿ ಕುಳ್ಳದಾಸಯ್ಯ ನವರ ಹೆಸರು ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ನಿಡಿ25 ರಲ್ಲಿ ಕುಳ್ಳದಾಸಯ್ಯ ನವರ ಹೆಸರಿ ಕೆಳಗೆ ದಾಸಯ್ಯ ಬಿನ್ ವೆಂಕಟಯ್ಯ ಎಂದು ಸೃಷ್ಟಿ ಮಾಡಿಕೊಂಡು ಹಾಜರುಪಡಿಸಿಸುತ್ತೇನೆ ಎಂದರೆ ಸರಿಯಲ್ಲ. ನಿಡಿ26 ರಲ್ಲಿ ನಮೂದಾಗಿರುವ ದಾಸಯ್ಯ ಬಿನ್ ತಿಮ್ಮಯ್ಯ ಮತ್ತು ತಿಮ್ಮಯ್ಯ ಬಿನ್ ವೆಂಕಟಯ್ಯ ನವರ ಹೆಸರಿಗೆ ದರಕಾಸ್ತು ಆಗಿರುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಎ.ಸಿ ನ್ಯಾಯಾಲಯದಲ್ಲಿ ಸಿವಿಲ್ ನ್ಯಾಯಾಲಯಕ್ಕೆ ಹೋಗಲು ಹೇಳಿದ್ದರಿಂದ ವಾದಿಯರು ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಪ್ರಮಾಣಪತ್ರದಲ್ಲಿ ನಾನು ವಾದಿಯು ನನಗೆ ಗೊತ್ತಿರುತ್ತಾರೆ ಎಂದು ಹೇಳಿರುವುದಿಲ್ಲ. ಕುಳ್ಳದಾಸಯ್ಯ ನವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿರುವುದಿಲ್ಲ. ಈ ದಾವೆಯನ್ನು ಕುಳ್ಳದಾಸಯ್ಯ ನವರ ಮಕ್ಕಳು ಹಾಕಿರುತ್ತಾರೆ ಎಂದು ಗೊತ್ತಿರುತ್ತದೆ, ಅವರ ಪೈಕಿ 2 ನೇ ಪ್ರತಿವಾದಿ ಮಾತ್ರ ನನಗೆ ಪರಿಚಯವಿರುತ್ತಾರೆ.

ದಾವ ಸರ್ವೆ ನಂ.39 ಯಾವಾಗ ದುರಸ್ತಿಯಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನನಗೆ ದಾವಆಸ್ತಿಯ ಆಜುಬಾಜುದಾರರ ಹೆಸರುಗಳು ಗೊತ್ತಿರುತ್ತದೆ, ಅವರ ಜಮೀನಿನ ಸರ್ವೆ ನಂಬರು ಗೊತ್ತಿರುವುದಿಲ್ಲ. ದಾವಆಸ್ತಿಯ ಪೂರ್ವಕ್ಕೆ ತೆರೆಸಾ ಪ್ಯಾರಿಸ್ ಸೊಸೈಟಿಯವರ ಜಮೀನು ಇರುತ್ತದೆ ಎಂದರೆ ಸರಿ. ಪಶ್ಚಿಮಕ್ಕೆ ಮರಿಸಿದ್ದಯ್ಯ, ಚನ್ನಮ್ಮ ಮತ್ತು ದುಗ್ಗಿಮಣಿ ರವರು ಆಸ್ತಿ ಇರುತ್ತದೆ. ಉತ್ತರಕ್ಕೆ

ತೆರೆಸಾ ಪ್ಯಾರಿಸ್ ಸೊಸೈಟಿಯವರ ಜಮೀನು ಮತ್ತು ಕುಳ್ಳಯ್ಯ ರವರ ಜಮೀನು ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಕ್ಷಿಣಕ್ಕೆ ಜವರಯ್ಯನ ಹೆಂಡತಿ ಮಂಚಮ್ಮ ರವರ ಜಮೀನು ಇರುತ್ತದೆ. ದಾವಆಸ್ತಿಗೂ ನನಗೂ ಯಾವುದೇ ಸಂಬಂಧ ಇರದಿದ್ದರೂ ಸಹ ನಾನು ನನಗೆ ಮಾರಾಟ ಮಾಡಿದವರ ಜೊತೆ ಶಾಮೀಲಾಗಿ ಸುಳ್ಳು ದಾಖಲೆಯನ್ನು ಸೃಷ್ಟಿ ಮಾಡಿಕೊಂಡು ವಾದಿಯರ ದಾವಆಸ್ತಿಯ ಸ್ವಾಧೀನಕ್ಕೆ ತೊಂದರೆ ಉಂಟು ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ತಿಮ್ಮಯ್ಯ ನವರ ಮಗಳ ಹೆಸರು ಮೀನಾಕ್ಷಿ ಆಗಿದ್ದು ಆಕೆಯ ಗಂಡನ ಹೆಸರು ಮಹೇಶ ಆಗಿರುತ್ತದೆ. ಸದರಿ ಮೀನಾಕ್ಷಿ ಮತ್ತು ಮಹೇಶ ನನ್ನ ಮೈದುನನ ಮಗಳು ಮತ್ತು ಆಕೆಯ ಗಂಡ ಆಗಿರುತ್ತಾರೆ. ಹರಿದಾಸ್ ಎಂಬುವವರು ನನ್ನ ತಮ್ಮನಾಗಬೇಕು. ನಾವೆಲ್ಲರೂ ಸೇರಿ ನಿಡಿ22 ನ್ನು ಸೃಷ್ಟಿ ಮಾಡಿ ವಾದಿಯರ ಆಸ್ತಿಯನ್ನು ಕಬಳಿಸಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ತಿಮ್ಮಯ್ಯ ಮತ್ತು ದಾಸಯ್ಯ ರವರು ಎಂದಿಗೂ ದಾವಆಸ್ತಿಯ ಸ್ವಾಧೀನದಲ್ಲಿರದಿದ್ದರೂ ನಾನು ಅವರ ಜೊತೆ ಶಾಮೀಲಾಗಿ ಸುಳ್ಳು ಕ್ರಯಪತ್ರವನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನನ್ನ ಭಾವನ ಹೆಂಡತಿ ಮತ್ತು 3 ನೇ ಪ್ರತಿವಾದಿ ನನ್ನ ಮೈದುನನ ಮಗನಾಗಬೇಕು. ದಾವಆಸ್ತಿಯು ಕುಳ್ಳದಾಸಯ್ಯ ನವರಿಗೆ ದರಕಾಸ್ತು ಮೂಲಕ ಮಂಜೂರಾಗಿದ್ದು, ನಾನು ಬಸವರಾಜು ಹಾಗೂ ಇತರರ ಜೊತೆ ಶಾಮೀಲಾಗಿ ಸುಳ್ಳು ಕ್ರಯಪತ್ರವನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾಸಯ್ಯ, ತಿಮ್ಮಯ್ಯ ಅಥವಾ ನಾನು ಎಂದಿಗೂ ದಾವಆಸ್ತಿಯಲ್ಲಿ ಸ್ವಾಧೀನದಲ್ಲಿರದಿದ್ದರೂ ಸಹ ಸುಳ್ಳು ಸಾಧನೆ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ವಾದಿ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.